ಸೊಗಲದ ಸೂಜಿಗಲ್ಲಿನಂತ ಸಪೂರಕೆ ಉದ್ದೋಕ ಬಂದು ನಿಂತ ಆಸಾಮಿಯ ದಿಡವನ್ನೊಮ್ಮೆ ಅಪಾದಮಸ್ತಕ ಪರೀಕ್ಷಿಸಿ ಬಸವನ ಕೃಪೆ ಎಂದೆನುತ್ತ ಯಾವೂರು... ಯಾಮಂದಿ ಎಂಬುದಾಗಿ ಬಾಹ್ಯಚಹರೆಗಳಲ್ಲಿಯೇ ಅಂದಾಜು ಮಾಡಿಕೊಳ್ಳುತ್ತ, ಮಗಳ ಮುಖದಲ್ಲಿ ನಾಟ್ಯವಾಡುತ್ತಿದ್ದ ಉಲ್ಲಾಸವನ್ನು ಅವಲೋಕಿಸಿದರು. ಈ ನಗು ಕಾಣದೆ ಎಷ್ಟೋ ದಿನಗಳಾಗಿದ್ದವು. ಆವೊತ್ತು ಪುರುಸೊತ್ತಿಲ್ಲದಂತೆ ಮನೆಯಲ್ಲ ಧಡಫಡ ಮಾಡುತ್ತ ಓಡಾಡುತ್ತಿದ್ದ ಹೆಂಡತಿ ಯಾಕೋ ಎದೆಯಲ್ಲಿ ಚುಚ್ಚುತ್ತಿದೆ ಎಂಬುದಾಗಿ ಹೇಳುತ್ತ ತೂಗುಮಂಚದ ಮೇಲೆ ಹಾಗೆ ಒರಗಿದಳು. ಅವಳು ಟೀಪಾಯ ಮೇಲಿಟ್ಟಿದ್ದ ಬ್ಯಾಂಕ್‌ಪುಸ್ತಕ, ಚೆಕ್, ಅಡತಿಯ ಖಾತೆಕಿರ್ದಿ, ಲಗ್ನಪತ್ರಿಕೆ, ಪತ್ರಗಳನ್ನು ಇನ್ನೇನು ಒಂದೊಂದಾಗಿ ತಿರುವಿ ಹಾಕಬೇಕೆನ್ನುವಷ್ಟರಲ್ಲಿ ಆಕೆ ತೇಲುಗಣ್ಣು ತೇಲಿಸುತ್ತ ಗುಡ್ಡೆಗಳನ್ನು ಒಂದುಸುತ್ತು ತಿರುಗಿಸಿ ಈ ಭೂಮಿಯ ಋಣ ತೀರಿಸಿ ಜೀವಿತದ ಜಂಝಾವಾತದ ಬೇನೆಗಳಿಗೆ ವಿದಾಯ ಹೇಳಿ ಬಸವನಪಾದ ಸೇರಿದಳು. ಬಸವಾ ಎಂದೋಡಿ ಹಿಡಿದುಕೊಳ್ಳುವಷ್ಟರಲ್ಲಿ ಶಾಣಪ್ಪನವರ ಬೆನ್ನಿಗಿದ್ದ ದೈತ್ಯಶಕ್ತಿಯೊಂದು ಗೋಣುಚೆಲ್ಲಿಕೊಂಡು ಮಲಗಿತ್ತು.

ಯಾರು ಯಾರಿಗೆ ಸುದ್ದಿಮುಟ್ಟಿಸಿದರೋ ಮುಂದಿನ ತಾಸುದೀಡತಾಸಿನಲ್ಲಿ ಜನಸಾಗರವೇ ಅಂತಿಮದರ್ಶನಕ್ಕೆ ಹರಿದುಬಂದಿತು. ಮಂತ್ರಿಗಳು, ಶಾಸಕರು, ತಾಲ್ಲೂಕು ಮಟ್ಟದ, ಪ್ರತಿಹಳ್ಳಿಯ ಲೀಡರ್ರುಗಳು, ಯುವಕಸಂಘದ ಹುಡುಗರು, ಭಜನಾಸಂಘದವರು ಮಠದವರು... ಲೆಕ್ಕವಿಲ್ಲದಷ್ಟು ಮಂದಿ ಅವಳ ಅಂತಿಮಯಾತ್ರೆಗಾಗಿ ದಂಡುದಂಡಾಗಿ ಬರಹತ್ತಿದ್ದರು. ವಿನಿತಾಳ ಅತ್ತೆ 'ಹಾವೂಮುಂಗಸಿ ಹಾಂಗ ತಾಯಿ ಮಗಳು ಕಚ್ಚಾಡುತ್ತಿದ್ದಿರಲ್ಲೇ... ಇನ್ಯಾರಕೂಟ ನಿನ್ನ ಹಾಕ್ಯಾಟ ಸುರುಮಾಡತಿಯೇ ವಿನಿತಾ, ದೇವರಂಥ ವೈನಿ ನಮ್ಮ ಅಣ್ಣನ ವತನದಾರಿಕೆ ತೂಗಸತಿದ್ದಳಲ್ಲೋ... ಇನ್ಯಾರಪ್ಪ ನನ್ನ ತವರಮನಿ ಚಾಮರಾ ಎತ್ತಿಹಿಡಿತಾರೋ' ಎಂದು ರಾಗವಾಗಿ ಅಪಲಾಪ ಸೋಸುತ್ತ ಮನೆಯಂಗಳಕ್ಕೆ ಬರುತ್ತಿದ್ದಂತೆ ವಿನಿತಾ ಎದ್ದು ತನ್ನ ಖೋಲಿಗೆ ಹೋದಳು. ಶಾಣಪ್ಪನವರು ಮುಗಿಲು ಹರಕೊಂಡು ಬಿದ್ದಂತೆ ತಲೆಮೇಲೆ ಕೈಹೊತ್ತು ಕುಳಿತಿದ್ದರು. ಅಲ್ಲಿ ಸುದ್ದಿಮುಟ್ಟಿಸಿದವರಾರು, ಭಜನಿ ಹಾಡುವರಾರು, ಸಿದಿಗಿ ಬಿಗಿಯುವರಾರು, ಅಳುವವರಾರು... ಸದ್ದುಗಳಿಂದ ಮನೆಯಂಬುದು ಗಿಜಿಗಿಜಿಗುಡುತ್ತಿತ್ತು. ಅಷ್ಟೊತ್ತಿಗೆ ಮೈಮುಚ್ಚುವಂತ ಬಟ್ಟೆಯನ್ನು ತೊಟ್ಟುಕೊಂಡು ವಿಭೂತಿ, ಕುಂಕುಮ, ಝುಮುಕಿ, ಬೆಂಡೋಲೆ ನತ್ತುಗಳನ್ನು ಹಾಕಿಕೊಂಡು ಶೃಂಗಾರದಿಂದ ವೈಯ್ಯಾರಮಾಡುತ್ತ ಮಣ್ಣಿಗೆ ಬರುವ ಮಂದಿಮಕ್ಕಳನ್ನು ದಿಬ್ಬಣಕ್ಕೆ ಬಂದವರಂತೆ ಮಾತಾಡಿಸಲು ತೊಡಗಿದ ವಿನಿತಾಳನ್ನು ನೋಡಿ ಜನ ಗಾಬರಿಯಾಗಿದ್ದರು. ಅವಳ ಮುಖದಲ್ಲಿ ಯಾವ ಸೂತಕದ ಛಾಯೆಯೂ ಕಾಣದಿದ್ದಾಗ ಸ್ವತಃ ಶಾಣಪ್ಪನವರೇ ಮುಂದಾಗಿ ಶವಸಂಸ್ಕಾರ ಆಗುವ ತನಕ ವಿನಿತಾಳನ್ನು ಅವಳ ಖೋಲಿಯಲ್ಲಿ ಬಂಧಿಸಿಟ್ಟಿದ್ದರು.

ಹುಚ್ಚುಹಿಡಿದಿದೆ ಎಂದೆ ಮಾತಾಡಿಕೊಳ್ಳುತ್ತಿದ್ದ ಜನರ ಬಾಯಿಗೆ ಬೀಗಹಾಕಲಾದೀತೆ! ದೊಡ್ಡ, ಕುಲೀನ ಮನೆತನದವರ ಕತೆಗಳೆಂದರೆ ದವಡೆಗೆ ಸಿಕ್ಕ ಮೂಳೆಗಳಂತೆ ಜಗಿಯುತ್ತಲಿರುತ್ತಾರೆ. ತಾಳ ತಪ್ಪಿದ್ದ ವಿನಿತಾಳ ಶ್ರುತಿಯನ್ನು ಹದವಾಗಿಸಲು ನಾಡಿನ ನಾನಾ ದವಾಖಾನೆ, ಮಠ ಮಂದಿರಗಳಿಗೆಲ್ಲ ಹೋಗಿ ಬಂದರೂ ಸಾಧ್ಯವಾಗಿರಲಿಲ್ಲ. ಪುಣೆಯ ಅಗರವಾಲ ವೈದ್ಯರು ಕೌನ್ಸೆಲಿಂಗ್ ಮಾಡಿ ಬದುಕಿನ ಹಳಿಗೆ ವಿನಿತಾಳನ್ನು ಎಳೆದುತಂದಿದ್ದರು. ಈ ವಿಕ್ಷಿಪ್ತ ಮನಸ್ಸಿನ ಹುಡುಗಿ ಇಂದು ಮೆಲುವಾಗಿ ನಗುತ್ತ ಗೆಲುವಾಗಿರುವುದನ್ನು ಕಂಡು ಸಂತಸಪಟ್ಟಿದ್ದರು.